ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

MUNJAVU' Kannada Weekly, KOPPA-CHM. ಫೋನ್ : 114

8ನೇ ವರ್ಷ 33ನೇ ಸಂಚಿಕೆ ಕೊಪ್ಪ 22-4-1990 ಭಾನುವಾರ ಬೆಲೆ 60 ಪೈಸೆ

ಏ. 29ರಂದೇ ಚುನಾವಣೆ

ಕೊಪ್ಪ : ರಾಜ್ಯದ ಮಹಾ ನಗರ ಪಾಲಿಕೆಗಳು, ನಗರ ಸಭೆಗಳು ಮತ್ತು ಪುರಸಭೆ-ಪರಿವರ್ತಿತ ಪುರಸಭೆಗಳಿಗೆ ಏ. 29ರಂದೇ ಚುನಾವಣೆಗಳು ನಡೆಯಲಿವೆ

ಈ ಚುನಾವಣೆ ನಡೆಸುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ರಿಟ್ ಅರ್ಜಿಗಳನ್ನು ಹೈಕೋರ್ಟ್ ಏ. 20ರಂದು ವಜಾ ಮಾಡಿತು

ಈ ಕೊನೆ ಗಳಿಗೆಯವರೆಗೂ ಉಳಿದುಕೊಂಡ ಅನಿಶ್ಚಿತ ಸ್ಥಿತಿಯಿಂದಾಗಿ ಯಾವ ಅಭ್ಯರ್ಥಿಯೂ ಪ್ರಚಾರ ಕಾರ್ಯ ಆರಂಭಿಸಿಲ್ಲ ಹೀಗಾಗಿ, ಕೇವಲ ಇನ್ನೊಂದು ವಾರದಲ್ಲಿ ಪ್ರಚಾರ ಮುಗಿಸಬೇಕಾಗಿದ್ದು, ಎಲ್ಲಾ ಅಭ್ಯರ್ಥಿಗಳೂ ತರಾತುರಿಯಲ್ಲಿ ಪ್ರಚಾರಕ್ಕೆ ಧುಮುಕಿದ್ದಾರೆ

ಶೃಂಗೇರಿ 'ಮಿನಿ ವಿಧಾನಸೌಧ' ಉದ್ಘಾಟನೆ

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ : ಐದೂವರೆ ವರ್ಷದ ಹಿಂದೆ ಆರಂಭಿಸಲ್ಪಟ್ಟಿದ್ದ ಇಲ್ಲಿನ 'ಮಿನಿ ವಿಧಾನಸೌಧ'ವನ್ನು ಮುಖ್ಯಮಂತ್ರಿ ವೀರೇಂದ್ರ ಪಾಟೀಲ್ ಏ 16ರಂದು ಉದ್ಘಾಟಿಸಿದರು. ಶಾಸಕ ಯು.ಕೆ. ಶಾಮಣ್ಣ ಅಧ್ಯಕ್ಷತೆ ವಹಿಸಿದ್ದರು.

ಕಂದಾಯ ಮಂತ್ರಿ ಅಜೀಜ್ ಸೇಠ್, ಡಿ.ಎಂ. ಪುಟ್ಟೇಗೌಡ, ಡಿ ಕೆ. ತಾರಾದೇವಿ ಬಿ. ಎಲ್. ರಾಮದಾಸ್, ಕೆ. ವಿ. ರಾಮಪ್ಪಯ್ಯ, ಬೇಗಾನೆ ರಾಮಯ್ಯ, ಜಿಲ್ಲಾಧಿಕಾರಿ ವಿ ಉಮೇಶ್ ಮುಂತಾದವರು ಭಾಗವಹಿಸಿದ್ದರು.

"ಕ್ಷೇತ್ರದ 10 ಬೇಡಿಕೆಗಳ" ಬಿನ್ನವತ್ತಳೆಗೆ ಉತ್ತರವಾಗಿ ಮುಖ್ಯಮಂತ್ರಿಗಳು ಸಂಸ್ಕೃತ ವಿಶ್ವವಿದ್ಯಾಲಯಕ್ಕಾಗಿ 6 ಎಕರೆ ಭೂಮಿ ನೀಡಲು ಒಪ್ಪಿಕೊಂಡು ಮಿಕ್ಕ ಬೇಡಿಕೆಗಳನ್ನು ಪರಿಶೀಲಿಸುವ ಭರವಸೆಯಿತ್ತರು. 6 ಎಕರೆ ಭೂಮಿಯನ್ನು ಬಾಲಿಕಾ ಪ್ರೌಢಶಾಲೆಗಾಗಿ ಕೇಳಲಾಗಿತ್ತು ! (ಹೆಚ್ಚಿನ ವಿವರ ಮುಂದಿನ ಸಂಚಿಕೆಯಲ್ಲಿ. —ಸಂ.)

ಮೇರುತಿ, ಕೊಪ್ಪ ಜೇಸಿ ಪದಗ್ರಹಣ ಸಮಾರಂಭ

ಬಿಳಾಲುಕೊಪ್ಪ : ಇಲ್ಲಿನ ಮೇರುತಿ ಜೇಸೀಸ್‌ನ ಪದಗ್ರಹಣ ಸಮಾರಂಭ ಏ. 11 ರಂದು ನಡೆಯಿತು ರಾಜ್ಯ ಜೇಸೀಸ್ ನ ಪೂರ್ವ ಅಧ್ಯಕ್ಷ ಭೀಮೇಶ್ವರ ಜೋಷಿ ಪ್ರಮಾಣ ವಚನ ಬೋಧಿಸಿದರು. ಶ್ರೀಮತಿ ಸುಧಾ ವಿ. ಮೂರ್ತಿ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಇತರ ಪದಾಧಿಕಾರಿಗಳು : ವೆಂಕಟರಮಣ, ವೆಂಕಟಕೃಷ್ಣ, ಎಂ. ಆರ್. ರಂಗನಾಥ್ (ಉಪಾಧ್ಯಕ್ಷರು), ಎ. ಸಿ. ಶಂಕರ್ (ಕಾರ್ಯದರ್ಶಿ), ಎ. ಎಲ್. ನಾಗಭೂಷಣ್ (ಖಜಾಂಚಿ), ಜಗನ್ನಾಥ ಹೆಬ್ಬಾರ್, ... ಆರ್. ವಿಷ್ಣುಮೂರ್ತಿ, ವಾಸುದೇವಮೂರ್ತಿ (ನಿರ್ದೇಶಕರು.)

ಕೊಪ್ಪ

ಒಂದು ವರ್ಷ ಪೂರೈಸಿರುವ ಇಲ್ಲಿನ ಜೇಸೀಸ್‌ಗೆ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಟಿ. ವಿ. ಶ್ರೀಕಾಂತ ಶೆಣೈ ಮತ್ತು ಇತರ ಪದಾಧಿಕಾರಿಗಳು ರಾಜ್ಯ ಉಪಾಧ್ಯಕ್ಷ ಜಿ. ಎಂ. ಭಟ್‌ರಿಂದ ಏ. 16 ರಂದು ಪ್ರಮಾಣ ವಚನ ಸ್ವೀಕರಿಸಿದರು. ರಾಜ್ಯ ಅಧ್ಯಕ್ಷ ಬಿ. ಆರ್. ಸಚ್ಚಿದಾನಂದ ನೂತನ ಪದಾಧಿಕಾರಿಗಳ ಪ್ರತಿಷ್ಠಾಪನೆ ನೆರವೇರಿಸಿದರು. ಬಿ. ಆರ್. ಪೂಜಾರ್, ಕೊಪ್ಪ ಲಯನ್ಸ್ ಅಧ್ಯಕ್ಷ ಡಾ|| ಹೇಮಂತ್ ಕುಮಾರ್ ಅತಿಥಿಗಳಾಗಿದ್ದರು. ನಿಕಟ ಪೂರ್ವ ಅಧ್ಯಕ್ಷ ಶ್ರೀನಿವಾಸರಾವ್ ಅಧ್ಯಕ್ಷತೆ ವಹಿಸಿದ್ದರು.

ಇತರ ಪದಾಧಿಕಾರಿಗಳು : ಚಂದ್ರಶೇಖರ ಆಚಾರ್. ಡಾ|| ಎಚ್. ಆರ್. ಜಗದೀಶ್, ಮಲ್ಲಪ್ಪ (ಉಪಾಧ್ಯಕ್ಷರು), ಎಸ್. ಎನ್. ಕೋಮಾರ್, (ಕಾರ್ಯದರ್ಶಿ), ವಿಶ್ವನಾಥ ನವಿಲೇಕರ್ (ಸಹ ಕಾರ್ಯದರ್ಶಿ), ಜೆ. ಕೆ. ವಿಜಯಕುಮಾರ್, (ಖಜಾಂಚಿ); ಶಿವಾನಂದ ಡಾ|| ನೆಗಲುಗುಳಿ, ಸಿ ಪ್ರೇಮಾ, ಸುರೇಶ್, ರತ್ನಾಕರ್ (ನಿರ್ದೇಶಕರು), ಡಿ ಸೀತಾರಾಮ ಭಟ್ ಮತ್ತು ಜಿ ಎಸ್. ನಾಯಕ್ ಸಲಹೆಗಾರರು)

ಟ್ರಾನ್ಸ್‌ಫಾರ್ಮರ್ ಸುಟ್ಟು ಕ್ಷೇತ್ರಾದ್ಯಂತ ವಿದ್ಯುತ್ ವ್ಯತ್ಯಯ
ಕೊಪ್ಪದಲ್ಲಿ ದಿನ ಬಿಟ್ಟು ದಿನ ನೀರು

ಕೊಪ್ಪ: ಇಲ್ಲಿ ಏ. 13ರಂದು 5 ಮೆ.ಗಾ ವ್ಯಾಟ್ ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್ ಸುಟ್ಟು ಹೋಗಿ, ಕೊಪ್ಪ, ಶೃಂಗೇರಿ, ನ ರಾ. ಪುರ ಈ ಮೂರೂ ತಾ||ಗಳಿಗೆ ವಿದ್ಯುತ್ ಪೂರೈಕೆಗೆ ತೀವ್ರ ಧಕ್ಕೆ ತಗುಲಿದೆ. ಸದ್ಯಕ್ಕೆ ತೀರ್ಥಹಳ್ಳಿಯಿಂದ ವಿದ್ಯುತ್ ಪೂರೈಕೆಗೆ ಏರ್ಪಾಡು ಮಾಡಲಾಗಿದ್ದು, ಬೆಳಗ್ಗೆ 6ರಿಂದ 9 ಹಾಗೂ ಸಂಜೆ 3ರಿಂದ 6 ಗಂಟೆವರೆಗೆ ವಿದ್ಯುತ್ ಕಡಿತ ಮಾಡಲಾಗುವುದು.

ಈ ವ್ಯವಸ್ಥೆಯಲ್ಲಿ ವೋಲ್ಟೇಜ್ ಮತ್ತು ಪೂರೈಕೆಯ ಸಮಸ್ಯೆಗಳು ಹಲವು ಬಾರಿ ಉಂಟಾಗುವ ಸಂಭವವಿದ್ದು, ಇರುವಷ್ಟು ಪೂರೈಕೆಯಲ್ಲಿ ಸಾರ್ವಜನಿಕರು ಸಹಕರಿಸಬೇಕಾಗಿ ಕ ವಿ.ಮಂ. ಅಧಿಕಾರಿಗಳು ವಿನಂತಿಸಿದ್ದಾರೆ

ಕೊಪ್ಪಕ್ಕೆ ದಿನ ಬಿಟ್ಟು ದಿನ ನೀರು ಪೂರೈಕೆ

ಈ ರೀತಿ ವಿದ್ಯುತ್ ವ್ಯತ್ಯಯದಿಂದಾಗಿ ಕೊಪ್ಪದಲ್ಲಿ ಒಂದು ದಿನ ಮೇಲಿನ ಪೇಟೆಗೂ, ಒಂದು ದಿನ ಕೆಳಗಿನ ಪೇಟೆಗೂ ನೀರು ಪೂರೈಸುವುದರಿಂದ ಸಾರ್ವಜನಿಕರು ಸಹಕರಿಸಬೇಕಾಗಿ ಮಧ್ಯಾಂತರ ಮಂ. ಪಂಚಾಯ್ತಿ ಕೋರಿದೆ

ಹೊಸ ಟ್ರಾನ್ಸ್‌ಫಾರ್ಮರ್ ಮಂಜೂರು

ಶಾಸಕರ ಮತ್ತು ಊರಿನ ಪ್ರಮುಖರ ತೀವ್ರ ಪ್ರಯತ್ನದಿಂದಾಗಿ ಹೊಸ ಟ್ರಾನ್ಸ್‌ಫಾರ್ಮರ್ ಮಂಜೂರಾಗಿದ್ದು, ಅದರ ಸಾಗಾಣಿಕೆಗೆ ವಿಶೇಷ ಲಾರಿ ದೊರೆಯಬೇಕಾದ್ದರಿಂದ 15 ದಿನ ಅಥವಾ 1 ತಿಂಗಳೊಳಗೆ ಅದರ ಸ್ಥಾಪನೆ ನಡೆಯಬಹುದೆಂದೂ ಕ ವಿ ಮಂ. ಅಧಿಕಾರಿಗಳು ನಿರೀಕ್ಷಿಸಿದ್ದಾರೆ

ಶೃಂಗೇರಿ ಕ್ಷೇತ್ರಕ್ಕೆ ಪ್ರಾತಿನಿಧ್ಯ: ಮುಖ್ಯಮಂತ್ರಿಗೆ ನ.ರಾ. ಪುರ ಯುವ ಕಾಂ| ಒತ್ತಾಯ

ನ.ರಾ.ಪುರ : ಮುಖ್ಯ ಮಂತ್ರಿ ವೀರೇಂದ್ರ ಪಾಟೀಲರು ಇಲ್ಲಿಗೆ ಏ. 17 ರಂದು ಭೇಟಿ ಕೊಟ್ಟಿದ್ದಾಗ ಯುವ ಕಾಂಗ್ರೆಸ್ ಕಾರ್ಯಕರ್ತರು ಅವರನ್ನು ಭೇಟಿ ಮಾಡಿ ಶೃಂಗೇರಿ ಕ್ಷೇತ್ರದ ಪ್ರತಿನಿಧಿಗೆ ಮಂತ್ರಿ ಮಂಡಲದಲ್ಲಿ ಸೂಕ್ತ ಪ್ರಾತಿನಿಧ್ಯ ನೀಡಬೇಕೆಂದು ಒತ್ತಾಯಿಸಿದರು

ಪರಿಸರ ಸಂರಕ್ಷಣೆಯ ಅಂತರ ರಾಷ್ಟ್ರೀಯ ವಿಚಾರ ಸಂಕಿರಣ— ಪೃಥ್ವಿಯ ಸಮಗ್ರ ಪರಿಸರದ ಬಗ್ಗೆ ತೀವ್ರ ಕಾಳಜಿಯ ಚರ್ಚೆ

ಏಪ್ರಿಲ್ 2ರಿಂದ 6ರವರೆಗೆ ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಪರಿಸರ ಸಂರಕ್ಷಣಾ ಸಂಘದ (ಐ.ಯು.ಸಿ.ಎನ್.) ಆಶ್ರಯದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ, "ಪರಿಸರವನ್ನು ಹದಗೆಡಿಸದಂತೆ ಅಭಿವೃದ್ಧಿ ಸಾಧಿಸುವ ಬಗೆಯನ್ನು (ಸಸ್ಟೈನಬಲ್ ಡೆವಲಪ್‌ಮೆಂಟ್) ಹಾಗೂ ಪರಿಸರ ಸಂರಕ್ಷಣೆಯ ವಿಚಾರವನ್ನು ವಿಶ್ವದಾದ್ಯಂತ ಪ್ರಚುರಪಡಿಸುವುದು ಹೇಗೆ" ಎಂಬ ಬಗ್ಗೆ ವ್ಯಾಪಕ ಚರ್ಚೆ ನಡೆಸಿ, ಹಲವಾರು ಮಾರ್ಗೋಪಾಯಗಳನ್ನು ಪರಿಶೀಲಿಸಲಾಯಿತು.

"ಈ ಭೂಮಿ ನಮಗೆ ನಮ್ಮ ಪೂರ್ವಿಕರಿಂದ ಬಳುವಳಿಯಾಗಿ ಬಂದ ಆಸ್ತಿಯಲ್ಲ, ನಮ್ಮ ಮುಂದಿನ ಪೀಳಿಗೆಯವರಿಂದ ನಾವು ಎರವಲು ಪಡೆದದ್ದು. ಅದನ್ನು ಅವರಿಗೆ ಸುರಕ್ಷಿತವಾಗಿ ಒಪ್ಪಿಸಬೇಕಾದ ಜವಾಬ್ದಾರಿ ನಮ್ಮ ಮೇಲಿದೆ" ಎಂಬ ಪರಿಸರ ಸಂರಕ್ಷಣಾ ಸಿದ್ಧಾಂತವನ್ನು ಅಂತರ ರಾಷ್ಟ್ರೀಯ ಸಂಘದ ಶಿಕ್ಷಣ–ತರಬೇತಿ ಘಟಕದ ಅಧ್ಯಕ್ಷ ಎಂ.ಎ. ಪಾರ್ಥಸಾರಥಿ ಪ್ರಾಸ್ತಾವಿಕವಾಗಿ ಜ್ಞಾಪಿಸಿದರು.

ಪೃಥ್ವಿಯ ಸಂಪನ್ಮೂಲಗಳು ಅಕ್ಷಯವಲ್ಲ. ಅವುಗಳು ಪೂರ್ತಿ ಖಾಲಿಯಾಗದಂತೆ ಮತ್ತು ಸಾಧ್ಯವಾದಷ್ಟೂ ಪುನರುಜ್ಜೀವನಗೊಳ್ಳುವಂತೆ ಸಂರಕ್ಷಣಾತ್ಮಕವಾಗಿ ಬಳಸಬೇಕಾಗಿದೆ. ಆದರೆ ಜನರ ಒಳಿತಿಗೆಂದು ಹೂಡಿದ ಯೋಜನೆಗಳೆಲ್ಲ ಇಂದು ಈ ಸಂಪನ್ಮೂಲಗಳನ್ನು ಒಂದೊಂದಾಗಿ ಬತ್ತಿಸುತ್ತ, ಇಡೀ ಪೃಥ್ವಿಯ ಆರೋಗ್ಯ ಕೆಡಿಸುತ್ತಿವೆ. ಈ ತಪ್ಪನ್ನು ತಕ್ಷಣವೇ ಸರಿಪಡಿಸುವುದಲ್ಲದೆ, ಮುಂದಿನ ಪೀಳಿಗೆಗಳು ಈ ತಪ್ಪುಮಾಡದಂತೆ, ಸಾಧ್ಯವಿರುವ ಎಲ್ಲ ಶಿಕ್ಷಣ ವಿಧಾನಗಳಲ್ಲೂ ಪರಿಸರದ ಪ್ರಾಮುಖ್ಯ ಹೇಳಬೇಕು" ಎಂದು ವಿಶ್ವ ಬ್ಯಾಂಕ್ ಅಧಿಕಾರಿ ಶ್ರೀಮತಿ ಜೇನ್ ಪ್ರಾಟ್ ಹೇಳಿದರು.

ಜಲ ಮತ್ತು ವಾಯು ಮಾಲಿನ್ಯ, ಓಝೋನ್ ಪದರದಲ್ಲಿ ತೂತು, ವಿಶ್ವದ ಉಷ್ಣತೆಯ ತೀವ್ರ ಹೆಚ್ಚಳ ಮುಂತಾದ ಪರಿಸರ ಸಮಸ್ಯೆಗಳನ್ನು ಪಟ್ಟಿ ಮಾಡಿದ ವಿಜ್ಞಾನಿ ಡಾ|| ಚಂದ್ರಶೇಖರ್ ಮಕ್ಕಳಿಗೆ ನ್ಯೂಟನ್ ನಿಯಮದಂಥ ವೈಜ್ಞಾನಿಕ ಪಾಠಗಳನ್ನು ಕಲಿಸಿದಷ್ಟೇ ಪ್ರಾಮುಖ್ಯದಿಂದ ಪರಿಸರದ ಪಾಠಗಳನ್ನೂ ಕಲಿಸಬೇಕೆಂದರು. ಕೆನಡಾದ ರೋನಾಲ್ಡ್ ಲೀಜೆ ಮತ್ತು ರಷ್ಯದ ಡಾ|| ವಿಕ್ಟರ್ ಕೊಲಿಬೈನ್ ಪರಿಸರ ಮಾಲಿನ್ಯ ನಿಯಂತ್ರಣದಲ್ಲಿ ಅಂತರ ರಾಷ್ಟ್ರೀಯ ಮಟ್ಟದ ಪ್ರಯತ್ನ ಅಗತ್ಯವೆಂದರು

ಉದ್ಘಾಟನಾ ಭಾಷಣ ಮಾಡಿದ ಡಾ|| ಕರಣ್ ಸಿಂಗ್, "ವಿಜ್ಞಾನಕ್ಕೆ ಅತಿಯಾದ ಮಹತ್ವ ಕೊಟ್ಟು, ಪೃಥ್ವಿಯ ಸಂರಕ್ಷಣೆಯನ್ನು ಕಡೆಗಣಿಸುವ ಮೂಲಕ ಮಾನವ ಪೃಥ್ವಿಯ ಮೇಲಿನ ಮೂರು ಲೋಕಗಳಾದ ನೆಲ–ಜಲ–ವಾಯುವನ್ನು ಮಲಿನಗೊಳಿಸಿ, ಇಡೀ ಪೃಥ್ವಿಯ ಆಹಾರ ಸರಪಳಿಯನ್ನೇ ವಿಷಮಯಗೊಳಿಸಿದ್ದಾನೆ. ಭ್ರಷ್ಟ ಮಂತ್ರಿ, ಭ್ರಷ್ಟ ಕಂಟ್ರಾಕ್ಟರ್ ಮತ್ತು ಭ್ರಷ್ಟ ಅರಣ್ಯಾಧಿಕಾರಿಗಳ ದುಷ್ಟ ಕೂಟ ಇಂದು ಜಮ್ಮುವಿನಂಥ ಸಮೃದ್ಧ ನೆಲವನ್ನು ಕೂಡ ಒಂದು ಶೀತಲ ಮರುಭೂಮಿಯಾಗಿ ಮಾಡಿದೆ" ಎಂದರು.

ನಮ್ಮಲ್ಲಿ ಒಂದು ವಿಶ್ವ ವ್ಯಾಪ್ತಿಯ ಪ್ರಜ್ಞೆ, ವಿಶ್ವದ ಒಗ್ಗಟ್ಟಿನ ಪ್ರಜ್ಞೆ ಬೆಳೆಯಬೇಕು. ನಮ್ಮ ದೇಶದ ಪೂರ್ವಿಕರು ಅಥರ್ವ ವೇದದಲ್ಲಿ ಪರಿಸರ ಸಂರಕ್ಷಣೆಯ ಅತ್ಯುತ್ತಮವಾದ ಮಾರ್ಗೋಪಾಯಗಳನ್ನು ಮಂಡಿಸಿದ್ದಾರೆ. ಆದರೆ, ಅಭಿವೃದ್ಧಿಯೆಂಬ ಬಿಸಿಲ್ಗುದುರೆಯ ಬೆನ್ನು ಹತ್ತಿ ನಾವು ಅದನ್ನೆಲ್ಲ ಮರೆತಿದ್ದೇವೆ. ಆಚಾರ್ಯ ಅರವಿಂದರು 'ವಂದೇ ಮಾತರಂ–ಭವಾನಿ ಭಾರತಿ' ಎಂದುದನ್ನು ನಾವೀಗ 'ವಂದೇ ಮಾತರಂ–ಭವಾನಿ ವಸುಂಧರಾ' ಎಂದು ಧ್ಯಾನಿಸಬೇಕಾಗಿದೆ ಎಂದರು.

'ಸೆಕ್ಯುಲರಿಸಂ' ಎಂದರೆ "ಎಲ್ಲ ಧರ್ಮಗಳ ಬಗ್ಗೆ ಸಮಾನ ತಿರಸ್ಕಾರ" ಎಂದಲ್ಲ; "ಎಲ್ಲ ಧರ್ಮಗಳ ಬಗ್ಗೆ ಸಮಾನ ಗೌರವ" ಎಂದರ್ಥ. ಜಗತ್ತಿನ ಎಲ್ಲಾ ಧರ್ಮಗಳೂ ಈ ಪೃಥ್ವಿಯನ್ನು ಉಳಿಸಿ ಸಮೃದ್ಧಗೊಳಿಸುವುದನ್ನು ಪ್ರತಿಪಾದಿಸಿವೆ. ಆದ್ದರಿಂದ ಇಂದು ತಂತ್ರ ಜ್ಞಾನಕ್ಕೆ ಈ ಧಾರ್ಮಿಕ ದೃಷ್ಟಿಕೋನ ಅಳವಡಿಸಬೇಕು ಎಂದು ಅವರು ಪ್ರತಿಪಾದಿಸಿದರು.

ಇಂದು ವಿಶ್ವದ ಎಲ್ಲೆಡೆ ಯುವ ಪೀಳಿಗೆಯ ಜನ ಪೃಥ್ವಿಯ ರಕ್ಷಣೆಗೆ ಮುಂದಾಗುತ್ತಿದ್ದಾರೆ. ಆದರೆ ನಮ್ಮ ದೇಶದ ಯುವ ಜನರು ಏಕೆ ಪರಿಸರ ಮಾಲಿನ್ಯ ಪ್ರತಿಭಟಿಸಲು, ಅಣು ಶಕ್ತಿ ವಿರೋಧಿಸಲು ಮುಂದಾಗುತ್ತಿಲ್ಲ? ಎಂದು ಡಾ|| ಕರಣ್ ಸಿಂಗ್ ಪ್ರಶ್ನಿಸಿದರು. ಜನ ಸಂಖ್ಯೆಯನ್ನು ಕಟ್ಟುನಿಟ್ಟಾಗಿ ಹತೋಟಿಗೆ ತರಬೇಕೆಂದೂ, ಅದಿಲ್ಲವಾದರೆ, 'ಸಂರಕ್ಷಣಾತ್ಮಕ ಅಭಿವೃದ್ಧಿ' (ಸಸ್ಟೈನಬಲ್ ಡೆವಲಪ್‌ಮೆಂಟ್) ಎನ್ನುವ ಮಾತಿಗೆ ಅರ್ಥವಿಲ್ಲವೆಂದೂ ಅವರು ಒತ್ತಿ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ವೀರಪ್ಪ ಮೊಯ್ಲಿ, ಇದೊಂದು ಪರಿಸರ ಉಳಿಸುವ ಧರ್ಮಯುದ್ಧ ಎಂದು ವರ್ಣಿಸಿ, ಕರ್ನಾಟಕದ ತಮ್ಮ ಸರ್ಕಾರದ ಕೈಯಲ್ಲಿ ರಾಜ್ಯದ ಪರಿಸರ ಸುರಕ್ಷಿತವಾಗಿರುವ ಭರವಸೆ ನೀಡಿದರು. ಆದರೂ, 'ಭಾರತದ ಪರಿಸರವಾದಿಗಳು ಪಾಶ್ಚಾತ್ಯರ ಅನುಕರಣೆ ಮಾಡುತ್ತ ಅಭಿವೃದ್ಧಿಗೆ ಅಡ್ಡಗಾಲು ಹಾಕುತ್ತಿದ್ದಾರೆ' ಎಂಬ ಎಲ್ಲ ಭಾರತೀಯ ಭ್ರಷ್ಟ ರಾಜಕಾರಣಿಗಳ ಪ್ರಿಯವಾದ ಸಿದ್ಧಾಂತವನ್ನೇ ಸ್ವಲ್ಪ ಬಣ್ಣದ ಮಾತುಗಳಲ್ಲಿ ಪುನರುಚ್ಚರಿಸಲು ಮರೆಯಲಿಲ್ಲ!

ವಿಶ್ವದ ವಿವಿಧ ದೇಶಗಳ ಪರಿಸರ ಕಾರ್ಯಕರ್ತರುಗಳು, ಕುಟುಂಬ ಯೋಜನಾ ಕಾರ್ಯಕರ್ತರು, ಸಮುದಾಯ ಕಾರ್ಯಕರ್ತರು, ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಪರಿಸರ ಸಂದೇಶ ಹರಡುತ್ತಿರುವವರು, ಅರಣ್ಯೀಕರಣ ಕಾರ್ಯಕರ್ತರು ಮುಂತಾಗಿ ಹಲವಾರು ಮಂದಿ ತಮ್ಮ ತಮ್ಮ ವಿಚಾರ, ಅನುಭವಗಳನ್ನು ಮಂಡಿಸಿದರು. ವಿಚಾರ ಸಂಕಿರಣದ ಉದ್ದಕ್ಕೂ ಭಾಷಣಕಾರರು ಮತ್ತು ಶ್ರೋತೃಗಳ ನಡುವೆ ಗಹನವಾದ ಚರ್ಚೆ ನಡೆಯಿತು

ಮಕ್ಕಳಿಗೆ ಪರಿಸರದ ಪಾಠಗಳನ್ನು ಶಾಲಾ ಪಠ್ಯಗಳ ಮೂಲಕವೂ, ಪಠ್ಯೇತರ ಚಟುವಟಿಕೆಗಳ ಮೂಲಕವೂ ಕಲಿಸಿಕೊಡುವ ಬಗ್ಗೆ ಎಲ್ಲರೂ ಒಕ್ಕೊರಲಿನಿಂದ ಪ್ರತಿಪಾದಿಸುತ್ತಿದ್ದಾಗ ಕೆಲವು ಎಚ್ಚರಿಕೆಯ ಧ್ವನಿಗಳೂ ಕೇಳಿ ಬಂದುವು : ಎಲ್ಲ ವಿಚಾರಗಳನ್ನೂ "ಮಕ್ಕಳಿಗೆ ಮನವರಿಕೆ ಮಾಡಿಕೊಡಬೇಕು" ಎನ್ನುವವರೇ ಎಲ್ಲೆಡೆ
ತುಂಬಿರುವಾಗ, ಮಕ್ಕಳಿಗೆ ಭರಿಸಲಾಗದ
ಹೊರೆಯಾಗದಂತೆ ನೋಡಿಕೊಳ್ಳುವುದೂ
ಅಗತ್ಯ; ಮಕ್ಕಳಿಗೆ ತಿಳಿಸಿಕೊಡಬೇಕು
ಎನ್ನುವ ಮೂಲಕ ನಾವು ನಮ್ಮ ಪಾಂಡಿ
ತಕ್ಷಣದ ಹೊಣೆಯಿಂದ ನುಣುಚಿಕೊಳ್ಳ
ಬಾರದು ; ಮಕ್ಕಳು ಪಾಠದಿಂದ ಕಲಿಯು
ವುದಕ್ಕಿಂತಲೂ ಅತಿ ಹೆಚ್ಚನ್ನು ಹಿ
ಯರ ನಡತೆ ಅನುಸರಿಸುವ ಮೂಲಕ ಕ
ಯುತ್ತಾರೆ. ಆದ್ದರಿಂದ ನಾವು ಮೊದಲು
ಪ್ರಾಮಾಣಿಕವಾದ ಪರಿಸರ ಸಂರಕ್ಷಣಾ
ಪ್ರವೃತ್ತಿಯನ್ನು ನಮ್ಮ ದಿನ ನಿತ್ಯದ
ಬದುಕಿನಲ್ಲಿ ರೂಢಿಸಿಕೊಳ್ಳಬೇಕು—ಇವು
ಕೆಲವು ವಿಚಾರಗಳಾಗಿದ್ದವು.

ಅಂತೆಯೇ, ಹಳ್ಳಿಗರಿಗೆ ಪರಿಸರ ಸಂ
ಕ್ಷಣೆಯ ಪಾಠಗಳನ್ನು ಪಟ್ಟಣಿಗರು ಬಂದು
ಕಲಿಸಿಕೊಡಬೇಕಾಗಿಲ್ಲ. ಅವರು ಹಳ್ಳಿ
ಬಂದು, ತಾವು ಯಾವ ಯಾವ ರೀತಿಯಲ್ಲಿ
ಪರಿಸರದ ಮೇಲೆ ದುಷ್ಪರಿಣಾಮ ಹಾಗೂ
ಅರಣ್ಯ ನಾಶ, ಜಲ–ವಾಯು ಮಾಲಿನ್ಯ
ಉಂಟು ಮಾಡುತ್ತಿದ್ದೇವೆಂಬುದನ್ನು ಅರಿತು
ನಗರ ಸಂಸ್ಕೃತಿಯನ್ನು ಹದ್ದುಬಸ್ತಿಗೊಳಪ
ಸಬೇಕು ಎಂದವರು ಹೊನ್ನಾವರ 'ಸ್ನೇಹ
ಕುಂಜ'ದ ಡಾ|| ಕುಸುಮಕ್ಕ.

ಪರಿಸರಾಸಕ್ತರೆಂದುಕೊಂಡವರು ಇ
ಅಥವಾ ಇನ್ನೆಲ್ಲೋ ಚರ್ಚಿಸುತ್ತ ಕುಳಿತಿ
ವಾಗಲೇ, ಲಕ್ಷಾಂತರ ಎಕರೆ ಕಾಡುಗಳು
ಕ್ಷಣಾರ್ಧದಲ್ಲಿ ನಾಶವಾಗುತ್ತಿವೆ. ನಮಗೀ
ಬೇಕಿರುವುದು ಮಾತಿಗಿಂತ ತುರ್ತು ಕ್ರಿ
ಅದಕ್ಕಾಗಿ ವ್ಯಾಪಕವಾಗಿ ಜನತೆಯನ್ನು
ಒಟ್ಟುಗೂಡಿಸಬಲ್ಲ ಸತ್ವಶಾಲಿ ಜೀವಂ
ಉದಾಹರಣೆಗಳು ಬೇಕು — ಗಾಂಧೀಜಿ
ವಿನೋಬಾ, ಜೆ. ಪಿ., ಅಥವಾ ಸುಂದರ
ಲಾಲ್ ಬಹುಗುಣ, ಬಾಬಾ ಆಮ್ಟೆ
ರುಗಳಂಥವರು. ಅಯ್ಯಪ್ಪ ಪಂಥದಂ
ಕ್ಷಣಾರ್ಧದಲ್ಲಿ ಒಂದು ವ್ಯಾಪಕ ಸಂ
ಯನ್ನೇ ಸೃಷ್ಟಿಸಬಲ್ಲ ರಾಜ್‌ಕುಮಾರ್‌ರಂ
ಸಿನಿಮಾ ತಾರೆಗಳನ್ನೂ ಪರಿಸರ ಚಳುವ
ಆಳವಾಗಿ ಸೆಳೆದುಕೊಳ್ಳಬೇಕು ಎಂದು
ರ್ನಾಟಕದ ಇನ್ನೊಬ್ಬ ಮಹಿಳಾ ಪ್ರತಿ
ಪ್ರತಿಪಾದಿಸಿದರು.

(4ನೇ ಪುಟ

ಶೃಂಗೇರಿಯ ಪಂಚ ತಾರಾ ಆದ್ಯತೆಗಳು ....!?

ಪ್ರಿಯರೆ,

ಶೃಂಗೇರಿ ತಾಲ್ಲೂಕಿನ ಅಥವಾ ಇಡೀ ಶೃಂಗೇರಿ ಕ್ಷೇತ್ರದ ತುರ್ತಿನ ಬೇಡಿಕೆಗಳೇನು?

ಹೆಲಿಪ್ಯಾಡ್, 4–ಸ್ಟಾರ್ ಹೋಟೆಲ್, ಪ್ರವಾಸಿ ಬಂಗಲೆಗೆ ಇನ್ನೊಂದೆರಡು ಅಂತಸ್ತುಗಳು, ಮಿನಿ ವಿಧಾನ ಸೌಧಕ್ಕೆ ಇನ್ನೊಂದು ಅಂತಸ್ತು. ಕೊನೆಗೊಂದು ಸಂಸ್ಕೃತ ವಿಶ್ವ ವಿದ್ಯಾಲಯ. ಇವೇ ತಾನೆ?

ಗಗನಗಾಮಿಗಳಾಗಿಯೇ ಈ "ಪುಣ್ಯ ಕ್ಷೇತ್ರ"ಕ್ಕೆ ಬರಬಯಸುವವರು ಈವರೆಗೆ ಬಂದಂತೆ ಗಾಂಧಿ ಮೈದಾನದಲ್ಲಿ ಇಳಿದರೆ ಸಾಲದೆ? ಪ್ರವಾಸಿ ಬಂಗಲೆಗಳಿಲ್ಲದಿದ್ದಾಗಲೂ ಇಲ್ಲಿಗೆ ರಾಜ ಮಹಾರಾಜರುಗಳು ಕೂಡ ಬಂದು ಹೋಗಿಲ್ಲವೆ? ಮಠದಲ್ಲೇ ಇರುವ ಹತ್ತಾರು ಅತಿಥಿ ಗೃಹಗಳು ಈ ಆಧುನಿಕ 'ಹೈನೆಸ್' ಗಳಿಗೆ ಸಾಲುವುದಿಲ್ಲವೆ?

ಆಲ್ದೂರಿನಿಂದ ಆಗುಂಬೆ, ಕಮ್ಮರಡಿ ವರೆಗೆ; ತೀರ್ಥಹಳ್ಳಿ, ನ. ರಾ. ಪುರದಿಂದ ಕೆರೆಕಟ್ಟೆ, ಕಳಸದವರೆಗೆ–ಈ ವಿಸ್ತಾರವಾದ ಮಲೆನಾಡಿನ ದುರ್ಗಮವಾದ ಹಳ್ಳಿಗಾಡುಗಳಲ್ಲಿ ಪ್ರತಿ ವರ್ಷ ಮಲೇರಿಯಾ ರೋಗದಿಂದ ಸುಮಾರು 400 ಜನ, ಹಾವು-ಹುಚ್ಚು ನಾಯಿ ಕಚ್ಚಿ 50–100 ಜನ ಸಾಯುತ್ತಾರೆ ದಿನನಿತ್ಯದ ಇನ್ನಿತರ ಕಾಯಿಲೆ-ಕಸಾಲೆಗಳಿಗಂತೂ ಜನರಿಗೆ ಬವಣೆ ಪಡುವುದೇ ಪರಿಹಾರ ಎಂಬಂತಿದೆ.

ಇಷ್ಟು ದೊಡ್ಡ ಪ್ರಾಂತ್ಯದಲ್ಲಿ ಎಂಟು-ಹತ್ತು ಆಸ್ಪತ್ರೆಗಳಿದ್ದರೂ ಒಂದೂ ಸುಸಜ್ಜಿತವಿಲ್ಲ, ಅಲ್ಲಲ್ಲಿ ಒಳ್ಳೆಯ ವೈದ್ಯರಿದ್ದರೂ ಬೇಕಾದ ಸೌಕರ್ಯ, ಔಷಧಿಗಳಿಲ್ಲ. ಎಲ್ಲ ಕುಟುಕು ಜೀವದಲ್ಲೇ ಇರುವಂಥವು. ಖಾಸಗಿ ಪ್ರಾಕ್ಟೀಸು ಎಷ್ಟು ಆಕರ್ಷಕವೆಂದರೆ ಸರ್ಕಾರಿ ಸೇವೆಯನ್ನೂ ತೊರೆಯುವಷ್ಟು! ಏಳೆಂಟು ವರ್ಷಗಳಲ್ಲಿ ಸೈ
ಮೇಲೆ ಸೈಟು, ನಾಲ್ಕಾರು ಲಕ್ಷದ ಬಂಗ
ಮಾಡಿಕೊಳ್ಳುವಷ್ಟು!

ಧನ್ವಂತರಿ ಆಸ್ಪತ್ರೆಗೆ ಪುಣ್ಯಾ
ದೊಡ್ಡ ದೊಡ್ಡ ಆಧುನಿಕ ಚಿಕಿತ್ಸಾ ಉ
ಕರಣಗಳನ್ನೆಲ್ಲ ತರಿಸಿ ಹಾಕಿದರು. ಆ
ಸ್ಪೆಷಲಿಸ್ಟ್ ವೈದ್ಯರುಗಳೇ ಇಲ್ಲ

ಇಂಥ ಪರಿಸ್ಥಿತಿಯಲ್ಲಿ, ಇಷ್ಟು ಪ್ರ
ಶಕ್ಕೆ ಕೇಂದ್ರವಾಗಿ ಒಂದು ಒಳ್ಳೆ
ದೊಡ್ಡ ಆಸ್ಪತ್ರೆಯನ್ನು ಕೇಳಿ ಮಾ
ಕೊಳ್ಳುವ ಆಲೋಚನೆ ಬೇರೆ
ನಮ್ಮ ನಾಯಕ ಮಣಿಗಳಿಗೆ ಹೊಳೆಯ
ಬೇಡಿಕೆಗಳು ಮೇಲಿನಂಥವು–ಎಲ್ಲ ಹೊ
ತುಂಬಿದ ಮೇಲಿನವು

ಅವೇ ಇಲ್ಲಿನ ಆದ್ಯತೆಗಳೆ
ಎಂಬಂತೆ. ಎಂಥ ವಿಪರ್ಯಾಸ!

—ಎಚ್. ಪಿ ಶ್ರೀನಿವಾಸ ನಾಯ್
ತನಿಕೋಡು, ಶೃಂಗೇರಿ ತಾ||

...ದುಗರ ಪತ್ರಗಳು

...ಲೆ ಮರೆಯ ಕಲಾವಿದ

...ಯರೆ,

...ಂಗೇರಿ ತಾ|| ಬೇಗಾನೆ ಬಳಿಯ ಹಿಂ...ಳ್ಳಿ ಗಣಪತಿಕಟ್ಟೆಯಲ್ಲಿ ಏ. 15ರಂದು ...ನೇರಿಯ ಚೈತನ್ಯ ಯುವಕ ಸಂಘದವ...ನಡೆಸಿ ಕೊಟ್ಟ ಮನರಂಜನಾ ಕಾರ್ಯ...ಮದಲ್ಲಿ ಅಭಿನಯಿಸಿ, ಹಾಸ್ಯಗಾರರಾಗಿ ...ಲ್ಲರ ಮನ ಗೆದ್ದಿರುವ ಸುಬ್ರಮಣ್ಯ ...ತನ್ಯ ಯುವಕ ಸಂಘದಲ್ಲಿ ಎಲೆ ಮರೆಯ...ಯಂತೆ ಇದ್ದಾರೆ.

...ಇವರಿಗೆ ಉತ್ತಮ ಪ್ರೋತ್ಸಾಹ, ಅವ...ಶಗಳು ಸಿಕ್ಕಿ, ಹಾಸ್ಯ ಕಲಾವಿದರಾಗಿ...ದು ಮಲೆನಾಡಿಗೆ ಕೀರ್ತಿ ತರಲೆಂದು ...ರೈಸುತ್ತೇನೆ.

—ಕೃಷ್ಣಪ್ಪ, ಬೇಗಾನೆ.

ಮಲೆನಾಡಿನ ರಂಗಭೂಮಿಗೆ ಕಾಯಕಲ್ಪ : ಒಂದು ಪ್ರತಿಕ್ರಿಯೆ

ಪ್ರಿಯರೆ,

'ನೀನಾಸಂ' ನಾಟಕಗಳ ಬಗ್ಗೆ 'ಶೃಂಗ'ರವರ ವಿಮರ್ಶೆ ಮತ್ತು ಮಲೆನಾಡ ರಂಗಭೂಮಿ ಕುರಿತು ಅವರು ನಡೆಸಿದ ಚಿಂತನೆ ನೋಡಿ ('ಮುಂಜಾವು' 15-4-90) ಈ ಅಭಿಪ್ರಾಯ ಬರೆಯುತ್ತಿದ್ದೇನೆ.

ನೀನಾಸಂನಂಥ ಸರ್ವ ಶ್ರೇಷ್ಠ ತಂಡದ ಬಗ್ಗೆ ನಮಗೆ ಅಪಾರ ಗೌರವವಿದೆ. ಅವರಿಂದ ತಿಳಿಯುವುದೂ ಇದೆ. ಒಳ್ಳೆಯದೊಂದನ್ನು ಒಪ್ಪಿಕೊಳ್ಳಲು ಯಾರದೇ ಪ್ರೇರಣೆ—ಆದೇಶದ ಅಗತ್ಯ ಬೀಳುವುದಿಲ್ಲ ಆದರೆ ಬೆಳೆಯುತ್ತಿರುವವರನ್ನು ಅವರೊಂದಿಗೆ ಹೋಲ್ಲಿಸಿಕೊಳ್ಳುವುದು ಕೂಡಾ ಅರ್ಥಹೀನ.

ತಾಂತ್ರಿಕವಾಗಿ ಸಂಕೀರ್ಣವಾದ ನಾಟಕವೊಂದು ಕೇವಲ ಒಂದು ವರ್ಗದ ಬುದ್ಧಿಜೀವಿಗಳನ್ನು ತಲುಪಬಹುದು. ಇದು ಹೊಸ ಅಲೆ ನಾಟಕದ ಮಿತಿ ಕೂಡಾ ಹೌದು. ಆಗ ಕಂಪೆನಿಯ ಕಮರ್ಷಿಯಲ್ ನಾಟಕದಂತೆ ಇದೂ ಕೂಡಾ ಒಂದು ವಿಭಾಗದಿಂದ ಸೋಲುವುದಿಲ್ಲವೆ? ನಾನು ತಿಳಿದಂತೆ ಒಮ್ಮೆಲೆ 'ನೀನಾಸಂ'ನಂಥ ನಾಟಕದಿಂದ ಮುಗ್ಧ ಗ್ರಾಮೀಣ ಪ್ರೇಕ್ಷಕರನ್ನು ತಲುಪಲಾಗುವುದಿಲ್ಲ (ದಿಢೀರ್ ಕ್ರಾಂತಿಕಾರಿಗಳು ಆಳದಿಂದ ಅರಳಬಲ್ಲ ಬದಲಾವಣೆಯನ್ನೂ ಗಮನಿಸಬೇಕು.) ಕ್ರಮೇಣ ಇಂಥ ನಾಟಕದ ಬಗ್ಗೆ ಜನರಿಗೆ ತಿಳುವಳಿಕೆ ನೀಡುವಂತೆ ಪ್ರಯತ್ನಿಸಬಹುದು. ಆ ಹಂತದಲ್ಲಿ ಜನರನ್ನು ತಲುಪಹೊರಟ ಒಬ್ಬ ನಿರ್ದೇಶಕ ಅವರ ಮಿಡಿತ, ಆಸಕ್ತಿಗಳನ್ನು ಗಮನಕ್ಕೆ ತೆಗೆದುಕೊಳ್ಳುವುದು ಹೊಣೆಗೇಡಿತನ ಅಲ್ಲವೆಂದು ನನ್ನ ನಂಬಿಕೆ.

ಪ್ರಸ್ತುತ ಬರಹದಲ್ಲಿ ಶ್ರೀಯುತರು ಶೃಂಗೇರಿಯ 'ಕಲಾರಂಗ'ದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಈ ತಂಡಕ್ಕೆ ಆರ್ಥಿಕವಾಗಿ ಅನೇಕ ಸಮಸ್ಯೆಗಳಿವೆ. ನಮ್ಮ ಮಿತಿಯಲ್ಲೇ ಹೊಸತನ್ನು ನೀಡುವ ನಮ್ಮ ಆಸೆ ಕೆಲವು ಗೊಂದಲಗಳಿಂದ ಪರಿಪೂರ್ಣ ಅಲ್ಲದಿರಬಹುದು. ಆದ್ದರಿಂದ ನಮ್ಮ ಅನುಕೂಲತೆಗೆ ತಕ್ಕ ನಾಟಕ ನಾವೇ ಬರೆದು ಆಡುವುದು ಅನಿವಾರ್ಯವಾಗಿದೆ. ಇದು ಶ್ರೇಷ್ಠ ನಾಟಕ ರಚನೆಕಾರರನ್ನು ಅವಮಾನಿಸುವ ಉದ್ಧಟತನವೇನಲ್ಲ ತಂಡ ಜನಪ್ರಿಯ ನಾಟಕಗಳನ್ನು ಆಡಲು ಸಿದ್ಧ. ಆದರೆ ಕಡೇ ಪಕ್ಷ 5 ಅಥವಾ 3 ರೂಪಾಯಿ ಟಿಕೇಟು ಹಣ ಕೊಟ್ಟು ನಾಟಕ ನೋಡಬಲ್ಲವರು ಈ ವಿಮರ್ಶಕರಂಥ 100-50 ಮಂದಿ ಪ್ರೇಕ್ಷಕರಾದರೂ ಇದ್ದಾರೆಯೆ ಎಂಬುದು ನಮ್ಮ ಸಮಸ್ಯೆ!

ನಾಟಕದ ಪರಿಕಲ್ಪನೆ ಬದಲಾದೀತೆ ಎಂದು ಪ್ರಶ್ನಿಸುವ ವಿಮರ್ಶಕರು ಆ ತಂಡದ ಪರಿಕಲ್ಪನೆಯೇ ಅಂತಿಮ ಅಲ್ಲ; ಹಾಗೊಂದು ಸಿದ್ಧಾಂತ ಯಾರೂ ಮಾಡಿಟ್ಟಿಲ್ಲ ಎಂಬುದನ್ನು ಗಮನಿಸಬೇಕು. ಶೈಲಿಯೊಂದು ನೋಡುಗರ ನಡುವೆಯೇ ಹದಗೆಟ್ಟು ಒಂದು ರೂಪ ತಳೆಯಬೇಕು. ಅದು ಬದಲಾಗುತ್ತಿರಲೂ ಬಹುದು. ರೂಮಿನಲ್ಲಿ ಕಾಗದ-ಪೆನ್ನು ಹಿಡಿದು ಬದುಕನ್ನು ಶೋಧಿಸುವುದಕ್ಕೂ, ಹಳ್ಳಿಯ ಮುಗ್ಧರೆದುರು ರಾತ್ರಿ ಬಣ್ಣ ಬಳಿದು ನಾಟಕ ಆಡಿ ಅವರನ್ನು ತಲುಪುತ್ತಾ ಬದುಕನ್ನು ಶೋಧಿಸುವುದಕ್ಕೂ ವ್ಯತ್ಯಾಸವಿದೆ.

ಈಗ ಇಲ್ಲಿರುವ ರಂಗಭೂಮಿಯ ಪರಿಕಲ್ಪನೆ ಬದಲಾಗಬೇಕಾದರೆ ಅದರ ಸಾಧ್ಯತೆ ರಂಗಕರ್ಮಿಗಳಿಗೆ ತಿಳಿಯಬೇಕು. ಇದಕ್ಕೆ ಸರ್ಕಾರ-ನಾಟಕ ಅಕಾಡೆಮಿಯ ಬೆಂಬಲ ಬೇಕು. ತರಬೇತಿ ಶಿಬಿರಗಳಾಗಬೇಕು. ಆರ್ಥಿಕವಾಗಿ ಶಕ್ತವಾಗುವ ಥಿಯೇಟರ್ ರಂಗಭೂಮಿ ಬೆಳೆಯಬೇಕು. ಕಡೇ ಪಕ್ಷ ಅಲ್ಲೊಂದು ಇಲ್ಲೊಂದು ಇಂಥ ಪ್ರಯತ್ನಗಳನ್ನು ಸಣ್ಣ ಮಟ್ಟದಲ್ಲಾದರೂ ಮಾಡುವವರ ಬಗ್ಗೆ ಪ್ರಚಾರ ಬೇಕು. ಪ್ರಯತ್ನ ಕೆಟ್ಟದ್ದಿರಲಿ, ಒಳ್ಳೆಯದಿರಲಿ, ಕಟು ವಿಮರ್ಶೆ ಬರಬೇಕು. ಆದರೆ ನಮ್ಮ ವಿಮರ್ಶಕರು ಅಂಥ ಪ್ರಯತ್ನವನ್ನು "ಪ್ರಚಾರ ಪ್ರಿಯರ ಹಾರಾಟ" ಎಂದು ವರ್ಣಿಸಿ ತಮ್ಮ ತೀಟೆ ತೀರಿಸಿಕೊಳ್ಳುತ್ತಾರೆ.

ರಂಗಭೂಮಿ ಬದಲಾಗುವುದು ರಂಗಕರ್ಮಿಗಳಿಂದ ಮಾತ್ರ ಅಲ್ಲ, ಜವಾಬ್ದಾರಿಯುತ ಪ್ರೇಕ್ಷಕರಿಂದಲೂ ಹೌದು. 'ನೀನಾಸಂ' ಆಗಮನದಿಂದ ಪ್ರೇಕ್ಷಕರೂ ತಮ್ಮ ಜವಾಬ್ದಾರಿ ಅರಿಯ ಬೇಕಿದೆ. ಏಕೆಂದರೆ ನವಿರಿ ವಿಮರ್ಶಕರು 'ಕಲಾರಂಗ'ದ ಎಷ್ಟು

(4ನೇ ಪುಟಕ್ಕೆ)

ರೈತರ ಅಹವಾಲಿಗೆ ಸರ್ಕಾರದಲ್ಲಿ ಹಣವಿಲ್ಲ, ಮಂತ್ರಿ-ನಾಯಕರ ದರ್ಬಾರಿಗೆ ಎಣೆಯಿಲ್ಲ!

...ಯರೆ,

ರೈತರ ಸಾಲ ಮನ್ನಾಕ್ಕೆ ಸರ್ಕಾರ ವಿಮ...ರ್ಶೆ ಎಣಿಸುತ್ತಿದೆ ಸರ್ಕಾರದಲ್ಲಿ ಹಣ...ಲ್ಲವಂತೆ ! ಹೋಗಲಿ ಎಂದರೆ, ರಾಜ್ಯದ ...ಂದಿನ ಸರ್ಕಾರ 6 ವರ್ಷಗಳಿಂದ ಕೊಡು...ಬಂದಿದ್ದ ಶೇ. 7.5ಕ್ಕೆ ಮೇಲ್ಪಟ್ಟ ಬಡ್ಡಿ ...ಯಾಯಿತಿಯನ್ನೂ ಈ ಸರ್ಕಾರ ಬಂದೊಡ...ರೈತರಿಗೆ ಮೊಟ್ಟ ಮೊದಲ ಕೊಡುಗೆ...ಯಂತೆ ಕಿತ್ತುಕೊಂಡಿದೆ; ರೈತನ ಎದೆಯ ...ಮೇಲೆ ಚಪ್ಪಡಿ ಎಳೆದಿದೆ.

ಆದರೆ ಇದೇ ಸರ್ಕಾರದ ಮಂತ್ರಿ-ಮಹೋ...ದಯರುಗಳ, "ರಾಷ್ಟ್ರೀಯ" ನಾಯಕ...ಮಣಿಗಳ ದರ್ಬಾರಿಗೆ, ಅದ್ದೂರಿ ಪ್ರವಾಸ...ಗಳಿಗೆ ಏನೂ ಕೊರತೆಯಿಲ್ಲವಲ್ಲ ?

ಕಳೆದ 2 ವಾರದಲ್ಲಿ ಈ ಪುಟ್ಟ ಶೃಂಗೇರಿ...ಯಂಥ ಊರಿನಲ್ಲೇ 2 ಭಾರೀ ಸಮಾರಂಭ...ಗಳು ಜರುಗಿ ಹೋಗಿವೆ. ರಾಜೀವ್‌ಗಾಂಧಿ...ಯವರ ಒಂದು ಭೇಟಿಗೇ ಕನಿಷ್ಠ ಪಕ್ಷ 75 ...ಲಕ್ಷದಿಂದ 1 ಕೋಟಿ ರೂ. ಖರ್ಚಾಗುತ್ತ...ದಂತೆ. 'ಹತ್ತಿಪ್ಪತ್ತು ಬಾರಿ ಹೆಲಿಕಾಪ್ಟರ್...ಗಳ ಓಡಾಟವೇನು, ಸಾವಿರಾರು ಪೋಲೀಸ್ ...ಸಿಬ್ಬಂದಿಗಳ, ಉನ್ನತ ಅಧಿಕಾರಿಗಳ ...ವ್ಯವಸ್ಥೆಯ ಖರ್ಚೇನು! ಇದೆಲ್ಲ ಯಾವ ಜನ...ವರ್ಗದ ಉದ್ಧಾರಕ್ಕೆ ? ಇಂಥ ಒಂದೊಂದು ...ನಿರರ್ಥಕ ಭೇಟಿಯನ್ನು ರದ್ದು ಮಾಡಿದರೆ ...ಒಂದೆರಡು ಜಿಲ್ಲೆಗಳ ಕೃಷಿ ಸಾಲಗಳ ...ಬಡ್ಡಿ ರಿಯಾಯಿತಿಗಾದರೂ ಸಾಕಾಗುವ...ದಿಲ್ಲವೆ?

ಶೃಂಗೇರಿಯ 'ಮಿನಿ ವಿಧಾನ ಸೌಧ'ದ ...ಉದ್ಘಾಟನೆಯನ್ನು ಈ ದಿವಾಳಿತನದ ದಿನ...ಗಳಲ್ಲೂ ಮುಖ್ಯಮಂತ್ರಿಯೇ ಉದ್ಘಾಟಿ...ಸುವ ಅಗತ್ಯವೇನಿತ್ತು? ಅವರು ಬಂದಾಗ ...ಪ್ರಸ್ತುತ ಕೊಟ್ಟು ಏನೋ ಊರಿನ ...ಕೆಲಸ ಮಾಡಿಸಿಕೊಳ್ಳುವ 'ಣವೆನ್ನಲಿಕ್ಕೆ ಈ ...ದಿವಾಳಿ ಸರ್ಕಾರಗಳು ಏನೂ ಭರವಸೆ ...ಕೊಡಲಾಗದಷ್ಟು ಭಿಕಾರಿಯಾಗಿವೆ. ಕಡೇ ...ಪಕ್ಷ ಇವರುಗಳ ಆಡಂಬರದ ಕೆಲವು ಲಕ್ಷ ...ಗಳಾದರೂ ಬೊಕ್ಕಸಕ್ಕೆ ಉಳಿಯುತ್ತಿರ...ಲಿಲ್ಲವೆ? ಇಂಥದೇ ಇನ್ನೂ ಹಲವು ಪ್ರವಾಸ ...ಗಳನ್ನು ... ಜನ [illegible]

ತೆಯ ಕೆಲಸಕ್ಕೆ ದೊರಕುವುದಿಲ್ಲವೆ?

ರೈತ ಸಮುದಾಯದ ಓಟಿನಿಂದಲೇ ಅಧಿಕಾರಕ್ಕೆ ಬರುವ ಇವರುಗಳು ರೈತರ ಹಿತಕ್ಕಾಗಿ ಏನು ಮಾಡುತ್ತಿದ್ದಾರೆ?

ಒಮ್ಮೆ ಶಾಸಕ ಎನ್ನಿಸಿಕೊಂಡವನಿಗೆ ಜೀವಮಾನ ಪೂರ್ತಿ ಪೆನ್ಶನ್ ಬೇರೆ. ದಿ|| ಶಾಂತವೇರಿ ಗೋಪಾಲ ಗೌಡರಂತೆ ಇಂದು ಯಾವ ಶಾಸಕ ಬರಿಗೈಯಲ್ಲಿ ಮನೆಗೆ ಬರುತ್ತಾನೆ? 5 ವರ್ಷದೊಳಗೆ ಜೀವಮಾನ ಪೂರ್ತಿಗೆ ಸಾಕಾಗುವಷ್ಟು ಮಾಡಿಕೊಂಡೇ ಹೊರಗೆ ಬಂದಿರುತ್ತಾನೆ. ಮತ್ತೆ ಯಾಕೆ ಈ ಸೌಕರ್ಯ?

ರೈತ ಸಮುದಾಯ ಇವರುಗಳ ಈ ದುಬಾರಿ-ದುಂದುಗಳನ್ನು ಪ್ರಶ್ನಿಸಿ ಕೇಳುತ್ತಿಲ್ಲವೆಂದರೆ, ಇದಕ್ಕೆಲ್ಲ ಒಪ್ಪಿಗೆ ಕೊಟ್ಟಿದೆ ಎಂದಲ್ಲ; ತನ್ನ ಸಿಟ್ಟು ಪ್ರಕಟ ಮಾಡಲಾಗದಷ್ಟು ನಿಶ್ಚೇಷ್ಟಿತಗೊಂಡಿದೆ ಎಂದೇ ಅರ್ಥ.

ದೇಶದ ಬೆನ್ನೆಲುಬು ಹೀಗೆ ನಿಶ್ಚೇಷ್ಟಿತಗೊಳ್ಳುವುದು ಏಳಿಗೆಯ, ಅಭಿವೃದ್ಧಿಯ ಚಿಹ್ನೆಯಲ್ಲ ತಾನೆ?

ಎಸ್. ಎಲ್. ಶ್ರೀನಿವಾಸ ಹೆಗ್ಡೆ,
...ನೆಮ್ಮಾರು, ಶೃಂಗೇರಿ ತಾ||

ಕಾಡಿನ ಬೆಂಕಿ : ಒಂದು ಪ್ರತಿಕ್ರಿಯೆ

ಪ್ರಿಯರೆ,

ನಿಮ್ಮ 15-4-90ರ ಸಂಚಿಕೆಯಲ್ಲಿ ಬಾಣಂತಿ ಪ್ರಕಾಶ್ ಅವರು ಕಾಡಿನ ಬೆಂಕಿಯ ಬಗ್ಗೆ ಬರೆಯುತ್ತ, ಸರ್ಕಾರದವರು ಸಿನಿಮಾ ಸ್ಲೈಡ್‌ಗಳ ಮೂಲಕ ಮುಂಜಾಗ್ರತಾ ಕ್ರಮಗಳನ್ನು ಕುರಿತು ಪ್ರಚಾರ ಮಾಡಲೆಂದಿದ್ದಾರೆ.

ಆದರೆ ಇದು ಅಷ್ಟು ಸಮರ್ಪಕವೆನ್ನಿಸುವುದಿಲ್ಲ. ಹಳ್ಳಿಗಾಡಿನಲ್ಲಿ ಬಹಳ ಕಡಿಮೆ ಮಂದಿ ಸಿನಿಮಾ ನೋಡುವವರು, ಅದರಲ್ಲೂ ಬಹಳ ಮಂದಿ ಅವಿದ್ಯಾವಂತರು ಇರುತ್ತಾರೆ. ಅದರ ಬದಲು ಸ್ಥಳೀಯ ಸಂಘ ಸಂಸ್ಥೆಗಳ ಮೂಲಕ ಪ್ರತಿ ಹಳ್ಳಿ-ಗ್ರಾಮಗಳಲ್ಲೂ ಈ ಬಗ್ಗೆ ತಿಳುವಳಿಕೆ ನೀಡುವ ಶಿಬಿರಗಳನ್ನು ಏರ್ಪಡಿಸಿದರೆ ಹೆಚ್ಚು ಉಪಯೋಗವಾದೀತು.

—ಎಚ್. ಸಿ. ರಾಮಸ್ವಾಮಿ,
ಹೆ... [illegible]

ಪರೀಕ್ಷೆಗಳಲ್ಲಿ ನಕಲು ಹೊಡೆಯುವುದಕ್ಕೆ ಪರೀಕ್ಷಕ-ಶಿಕ್ಷಕರಿಂದಲೇ ಕುಮ್ಮಕ್ಕು

ಈ ಸಲದ ಎಸ್ಸೆಸ್ಸೆಲ್ಸಿ, 2ನೇ ಪಿ.ಯು.ಸಿ. ಪರೀಕ್ಷೆಗಳಿಗೆ ಕೊಪ್ಪ ಕೇಂದ್ರದಿಂದ ಕುಳಿತಿದ್ದ ವಿದ್ಯಾರ್ಥಿಗಳಿಗೆ ಹಲವು ಮಂದಿ ಶಿಕ್ಷಕರಿಂದಲೇ 'ಕಾಪಿ'ಗೆ ಪ್ರೋತ್ಸಾಹ ದೊರೆತಿರುವುದಾಗಿ ವಿದ್ಯಾರ್ಥಿಗಳಿಂದ ತಿಳಿದು ಬರುತ್ತದೆ.

ಕೆಲ ಮಂದಿ ರೂಮ್ ಸೂಪರ್‌ವೈಸರ್‌ಗಳು ಗೈಡುಗಳನ್ನು ಬಿಚ್ಚಿ, ಪ್ರಶ್ನೆ ಪತ್ರಿಕೆಯ ಪ್ರಶ್ನೆಗಳಿಗೆ ಉತ್ತರಗಳನ್ನು ವಿದ್ಯಾರ್ಥಿಗಳಿಗೆ ಮೆಲು ದನಿಯಲ್ಲಿ 'ಉಕ್ತಲೇಖನ' ಬರೆಸುತ್ತಿದ್ದುದೋ ಅಥವಾ ಬುದ್ಧಿವಂತ ವಿದ್ಯಾರ್ಥಿಗಳ ಬರೆದು ಮುಗಿದ ಉತ್ತರ ಪತ್ರಿಕೆಗಳನ್ನು ತೆಗೆದುಕೊಂಡು ತಮಗೆ ಬೇಕಿದ್ದ (ಪೂರ್ವ ನಿಯೋಜಿತ) ವಿದ್ಯಾರ್ಥಿಗಳಿಗೆ ಕೊಟ್ಟು ಕಾಪಿ ಮಾಡಿಸುತ್ತಿದ್ದುದೋ ಬಹಳ ಸಾಮಾನ್ಯ ದೃಶ್ಯವಾಗಿತ್ತೆನ್ನುತ್ತಾರೆ ವಿದ್ಯಾರ್ಥಿಗಳು. ತಮಗೆ 'ಅನುಕೂಲ'ಗಳಿಲ್ಲದ ಪರೀಕ್ಷಾ ಮೇಲ್ವಿಚಾರಕರು ಬರುವುದು ಕಂಡರೆ ಆ ಉತ್ತರ ಪತ್ರಿಕೆಗಳನ್ನು ... [illegible] ನೀಡುವ ಹೊಣೆಯನ್ನೂ ಅವರೇ ಹೊರುತ್ತಿದ್ದರಂತೆ.

ಇದೆಲ್ಲ ಕೇವಲ ಅಂತೆ ಕಂತೆಯಾಗಿರದೆ, ಯಾವ ವಿದ್ಯಾರ್ಥಿಗಳನ್ನು ಕೇಳಿದರೂ, ಆಯಾ ಪರೀಕ್ಷಕ ಮತ್ತು ವಿದ್ಯಾರ್ಥಿಗಳ ಹೆಸರಿನ ಸಹಿತವಾಗಿ ಹೇಳುತ್ತಿರುವ ಸಂಗತಿಯಾಗಿದೆ. ಇಂಥಗೊಂದಲದ, ಅರಾಜಕತೆಯ ವಾತಾವರಣ ಕಷ್ಟಪಟ್ಟು ಅಭ್ಯಾಸಮಾಡಿ ಪರೀಕ್ಷೆಗೆ ಬಂದು ತಾವೇ ಶ್ರಮ ವಹಿಸಿ ತೇರ್ಗಡೆಯಾಗಲು ಹವಣಿಸುವ ವಿದ್ಯಾರ್ಥಿಗಳಿಗೆ ಮಾನಸಿಕವಾಗಿ ಎಂಥ ಹಿಂಸೆ ನೀಡಬಲ್ಲದು ! ಇಂಥ ಪರೀಕ್ಷಕರುಗಳಾದ ಅಧ್ಯಾಪಕ ವರ್ಗ ಕೇವಲ ನಾಲ್ಕು ಕಾಸಿಗಾಗಿ ದೇಶಕ್ಕೆ ಎಂಥ ವಿಪತ್ಕಾರಿ ಭವಿಷ್ಯ ನಿರ್ಮಿಸುತ್ತಿದ್ದಾರೆಂದು ಯೋಚಿಸಲಾರರೆ ?

ಇವರಿಗೆ ಯಾರಾದರೂ ಯಾವ ರೀತಿ 'ಪೂಜೆ' ಮಾಡಿದರೆ, 'ದಕ್ಷಿಣೆ' ಇಕ್ಕಿದರೆ ಇವರಿಗೆ ನ್ಯಾಯ ಸಂದೀತು ?

—ಕೆ.ಎಸ್. ರಾಜೇಂದ್ರ, ...

ಪರಿಸರ ಸಂರಕ್ಷಣೆಯ ಅಂತರ ರಾಷ್ಟ್ರೀಯ ವಿಚಾರ ಸಂಕಿರಣ —

(2ನೇ ಪುಟದಿಂದ)

ಅಣು ವಿದ್ಯುತ್, ಉಷ್ಣ ವಿದ್ಯುತ್ ಅಥವಾ ಜಲ ವಿದ್ಯುಚ್ಛಕ್ತಿನ ಹಾಗೂ ನೀರಾವರಿಯ ಬೃಹತ್ ಯೋಜನೆಗಳ ಅಗತ್ಯ ನಿವಾರಿಸಬಲ್ಲ ಕಿರು ಯೋಜನೆಗಳು, ಇಂಧನ ಮತ್ತು ಉರುವಲಿನ ಉಳಿತಾಯವನ್ನು ದೊಡ್ಡ ಪ್ರಮಾಣದಲ್ಲಿ ಸಾಧಿಸಬಲ್ಲ ಒಲೆಗಳು ಮತ್ತು ಯಂತ್ರಗಳು, ವ್ಯಾಪಕ ಅರಣ್ಯ ನಾಶಕ್ಕೆ ಕಾರಣವಾಗುವ ಹಲವು ಪ್ಲಾಂಟೇಶನ್ ಬೆಳೆಗಳನ್ನು ಅರಣ್ಯ ನಾಶವಿಲ್ಲದೆ ಬೆಳೆಯಲು ಬದಲಿ ಕೃಷಿ ವಿಧಾನಗಳು ಮುಂತಾದುವುಗಳನ್ನು ಸಂಶೋಧಿಸಿ ವ್ಯಾಪಕವಾಗಿ ಬಳಕೆಗೆ ತರಬೇಕು ಎಂಬ ಸಲಹೆ ಮಂಡಿತವಾಯಿತು.

ರಾಸಾಯನಿಕ ಗೊಬ್ಬರ ಹಾಗೂ ಕ್ರಿಮಿ-ಕೀಟ-ಕಳೆ ನಾಶಕಗಳ ಬಳಕೆಯನ್ನು ತೀವ್ರವಾಗಿ ಕಡಿತಗೊಳಿಸುವುದು; ಬಂಡವಾಳಶಾಹಿ ಮಾರುಕಟ್ಟೆ ವ್ಯವಸ್ಥೆಯಲ್ಲಿ ಅನಗತ್ಯವಾಗಿ ಅತಿ ಹೆಚ್ಚು ಉತ್ಪಾದನೆ ಮಾಡುವುದನ್ನು ತಗ್ಗಿಸುವುದು, ವಿಶ್ವ ಮಟ್ಟದಲ್ಲಿ ಎಲ್ಲಾ ದೇಶಗಳಲ್ಲೂ ಸಾಮಾಜಿಕ-ಆರ್ಥಿಕ ಅಸಮಾನತೆಗಳನ್ನು ಗಣನೀಯವಾಗಿ ಕಡಿಮೆ ಮಾಡಲು ಕ್ರಮ ಕೈಗೊಳ್ಳುವುದು, ಜನತೆ ಸಣ್ಣ ಸಣ್ಣ ಗುಂಪುಗಳಾಗಿ ನಡೆಸುತ್ತಿರುವ ಸಂರಕ್ಷಣಾತ್ಮಕ ಚಟುವಟಿಕೆಗಳನ್ನೆಲ್ಲ ಒಗ್ಗೂಡಿಸುವುದು—ಇವೇ ಮೊದಲಾದ ವ್ಯಾಪಕ ವಿಷಯಗಳು ಚರ್ಚಿತವಾದವು

ಜನತೆ ಏನೆಲ್ಲ ಪ್ರಯತ್ನ ಮಾಡಿದರೂ ಅಂತಿಮ ನಿರ್ಧಾರ ರೂಪುಗೊಳ್ಳಲು ಕಾರಣವಾಗುವ ಆಡಳಿತಗಾರರಿಗೆ (ರಾಜಕಾರಣಿ ಮತ್ತು ಉನ್ನತ ಅಧಿಕಾರಿ ವರ್ಗ) ಸಂರಕ್ಷಣೆಯ ಪಾಠಗಳನ್ನು ಆಳವಾಗಿ ಮನವರಿಕೆ ಮಾಡಿ ಕೊಡುವ ಅತ್ಯಂತ ದುಸ್ಸಾಧ್ಯವಾದ ಕೆಲಸವೂ ಅತಿ ತುರ್ತಿನದೆನ್ನುವ ವಿಚಾರ ಒಕ್ಕೊರಲ ಮನ್ನಣೆ ಪಡೆಯಿತು. ಇದನ್ನು ಹೇಗೆ ಸಾಧಿಸಬಹುದೆಂಬ ಬಗೆಗೂ ಹಲವಾರು ಸಲಹೆಗಳು ಪರಿಶೀಲಿಸಲ್ಪಟ್ಟವು.

ಸಂಕಿರಣದ ಉದ್ದಕ್ಕೂ ಭಾರತೀಯ ಮತ್ತು ಕೆಲವು ವಿದೇಶೀಯ ಕಲಾ ಮಾಧ್ಯಮಗಳಾದ ಹರಿಕಥೆ, ಯಕ್ಷಗಾನ, ಸಂಗೀತ, ನೃತ್ಯ, ಮಾತಾಡುವ ತಮಟೆ (ಆಫ್ರಿಕ), ಬೀದಿ ನಾಟಕ, 'ಗೆರಿಲ್ಲಾ ಥಿಯೇಟರ್' ಎಂಬ ಒಂದೆರಡು ನಿಮಿಷಗಳ ದಿಢೀರ್ ನಾಟಕದಂಥ ಕಾರ್ಯಕ್ರಮ (ಅಮೆರಿಕದ ಕಾಲೇಜು ಯುವತಿಯೊಬ್ಬಳು ರೂಪಿಸಿದ್ದು) ಮುಂತಾದುವುಗಳ ಮೂಲಕ, ಪರಿಸರ ವಿಚಾರವೂ ಸೇರಿದಂತೆ ಯಾವುದೇ ವಿಚಾರಗಳನ್ನು ಹೇಗೆ ಜನತೆಗೆ ಅತಿ ಪರಿಣಾಮಕಾರಿಯಾಗಿ ಮುಟ್ಟಿಸಬಹುದು ಎಂಬುದರ ಪ್ರತ್ಯಕ್ಷ ಪ್ರದರ್ಶನಗಳೂ ಸಂಯೋಜಿಸಲ್ಪಟ್ಟಿದ್ದವು

ವಿಶ್ವದ ಎಲ್ಲ ದೇಶಗಳಿಗೆ ಅನ್ವಯವಾಗುವಂಥ ಪರಿಸರ ಕಾರ್ಯ ತಂತ್ರವೊಂದನ್ನು ಐಯುಸಿಎನ್ 1980ರಲ್ಲಿ ಸಿದ್ಧಪಡಿಸಿ 'ವಿಶ್ವ ಸಂಸ್ಥೆಗೆ ಒಪ್ಪಿಸಿತ್ತು. ಈ ವರ್ಷ ಅದರ ತಳಹಾಯದ ಮೇಲೆ, ಹೊಸ ವಿಚಾರಗಳನ್ನು ಸೇರಿಸಿ ಹೊಸ ನೀತಿಯ ಕರಡನ್ನು ರೂಪಿಸಿದ್ದು, ಅದರ ಮೇಲೆ ವಿಶ್ವಾದ್ಯಂತ ಚರ್ಚೆ ನಡೆಯುತ್ತಿದೆ. ಅದರಿಂದ ಬರುವ ಸಲಹೆಗಳನ್ನೆಲ್ಲ ಕ್ರೋಢೀಕರಿಸಿ, 1990ರ ಡಿಸೆಂಬರ್ 5ರಂದು ಆಸ್ಟ್ರೇಲಿಯದಲ್ಲಿ ನಡೆಯುವ ಐಯುಸಿಎನ್ ಮಹಾಸಭೆಯ ಮುಂದೆ ಮಂಡಿಸಿ, ಅಲ್ಲಿ ಅಂಗೀಕಾರ ಪಡೆದ ಅಂತಿಮ ದಸ್ತಾವೇಜನ್ನು, ವಿಶ್ವಾದ್ಯಂತ ಮಾರ್ಗದರ್ಶಕ ಸೂತ್ರಗಳಾಗಿ ಜಾರಿಗೆ ಕೊಡಲು, 1992ರಲ್ಲಿ ನಡೆಯುವ ವಿಶ್ವಸಂಸ್ಥೆಯ 'ಪರಿಸರ ಮತ್ತು ಅಭಿವೃದ್ಧಿ' ಕುರಿತ ಸಮಾವೇಶಕ್ಕೆ ಸಲ್ಲಿಸಲಾಗುವುದು. ಬೆಂಗಳೂರಿನ ಈ ಸಮಾವೇಶದಲ್ಲಿ ಈ ಕರಡು ದಸ್ತಾವೇಜಿನಲ್ಲಿ ಅಳವಡಿಸಲು ಮೇಲ್ಕಂಡ ಮತ್ತು ಇತರ ಹಲವಾರು ಸಲಹೆ-ತಿದ್ದುಪಡಿಗಳು ಮಂಡಿಸಲ್ಪಟ್ಟವು.

ಇಷ್ಟೆಲ್ಲದರ ನಡುವೆ ಅಸಮಾಧಾನಗಳೂ ಹೊಗೆಯಾಡದಿರಲಿಲ್ಲ. ಮೊಟ್ಟ ಮೊದಲನೆಯದಾಗಿ, ಪಂಚತಾರಾ ಸಂಸ್ಕೃತಿ ಪರಿಸರ ವಿನಾಶಕ್ಕೆ ಬಹು ದೊಡ್ಡ ರೀತಿಯಲ್ಲಿ ಕಾರಣವಾಗುತ್ತಿರುವಾಗ, ಪಂಚತಾರಾ ಹೋಟೆಲೊಂದರ ಹವಾ ನಿಯಂತ್ರಿತ ಸಭಾಂಗಣದಲ್ಲಿ 250ಕ್ಕೂ ಹೆಚ್ಚು ವಿದ್ಯುದ್ದೀಪಗಳ ಬೆಳಕಿನಲ್ಲಿ ಈ ವಿಚಾರ ಸಂಕಿರಣ ನಡೆಯುತ್ತಿರುವುದನ್ನು ಕರ್ನಾಟಕದ ಮತ್ತು ಇತರ ರಾಜ್ಯಗಳ ಪರಿಸರ ಕಾರ್ಯಕರ್ತರು ಉಗ್ರವಾಗಿ ಪ್ರತಿಭಟಿಸಿದರು. "2-3 ಕೋಟಿಗಳ ಅಗತ್ಯವಿರುವ ಚಳಿಯ ದೇಶಗಳ ಪ್ರತಿನಿಧಿಗಳನ್ನು ಏಕ್‌ದಂ 36 ಡಿಗ್ರಿಗೂ ಹೆಚ್ಚಿನ ಉಷ್ಣತೆಗೆ ಒಡ್ಡುವುದು ಸರಿಯಲ್ಲದ್ದರಿಂದ ಇಂಥ ವ್ಯವಸ್ಥೆ ಅಗತ್ಯವಾಯಿತೆಂ"ಬ ಸಂಘಟಕರ ಸಮಜಾಯಿಷಿ ತೃಪ್ತಿ ನೀಡಲಿಲ್ಲ.

ಅಂತೆಯೇ, ಪರಿಸರ ಸಂದೇಶವನ್ನು ಜನತೆಗೆ ಮುಟ್ಟಿಸುವುದು ಹೇಗೆ, ಆ ಬಗ್ಗೆ ಪ್ರಸಾರ ಮಾಧ್ಯಮಗಳು ಹೆಚ್ಚು ಹೆಚ್ಚು ಪ್ರಚಾರ ನೀಡುವಂತೆ ಮಾಡುವುದು ಹೇಗೆ—ಎಂಬ ಬಗ್ಗೆ ಈ ಸಮಾವೇಶ ತಲೆ ಚಚ್ಚಿಕೊಳ್ಳುತ್ತಿದೆ ಆದರೆ ಅತ್ತ ಈ ಆಂದೋಲನವನ್ನು ಅತ್ಯಂತ ನಿರಕ್ಷರಿ ಜನತೆಯ ನಡುವೆಯೂ ವ್ಯಾಪಕವಾಗಿ ಬೆಳೆಸಿರುವುದಲ್ಲದೆ, ಆ ಬಗ್ಗೆ ಮಾಧ್ಯಮಗಳೇ ಕಾಡು-ಹಳ್ಳಿಗಾಡುಗಳಿಗೆ ಹುಡುಕಿಕೊಂಡು ಹೋಗಿ ಪ್ರಚಾರ ನೀಡಬೇಕಾದಂಥ ಅಸಾಮಾನ್ಯ ಸಾಧನೆ ಮಾಡಿರುವ ಸುಂದರಲಾಲ್ ಬಹುಗುಣ, ಬಾಬಾ ಆಮ್ಟೆ, ಡಾ|| ಶಿವರಾಮ ಕಾರಂತ, ಕರ್ನಾಟಕದ 'ಅಪ್ಪಿಕೊ' ಮತ್ತು ಅಣುಶಕ್ತಿ ವಿರೋಧಿ ಚಳುವಳಿ ಕಾರ್ಯಕರ್ತರು—ಮುಂತಾದವರಲ್ಲಿ ಒಬ್ಬರಾದರೂ ಇಲ್ಲಿ ತಮ್ಮ ಅನುಭವಗಳನ್ನು ನಮಗೆ ತಿಳಿಸಿಕೊಡಲು ಆಹ್ವಾನಿತರಾಗಿಲ್ಲವೇಕೆ ? ಎಂಬ ತೀಕ್ಷ್ಣವಾದ ಪ್ರಶ್ನೆಯೂ ಸಂಘಟಕರನ್ನು ನಿರುತ್ತರರನ್ನಾಗಿಸಿತು.

ಸಮಾವೇಶದ ಉದ್ದಕ್ಕೂ ಈ ಕೆಲವು ಅಸಮಾಧಾನಗಳು ಪ್ರಾಮಾಣಿಕ ಪರಿಸರಾಸಕ್ತರನ್ನು ಕಾಡುತ್ತಲೇ ಇದ್ದರೂ, ಒಟ್ಟಿನಲ್ಲಿ ಇದೊಂದು ಉಪಯುಕ್ತ ಕಾರ್ಯಕ್ರಮವಾಗಿಯೇ ಉಳಿಯಿತು.

—ಸಿರಿಮನೆ ನಾಗರಾಜ್.

ಮಲೆನಾಡಿನ ರಂಗಭೂಮಿ...

(3ನೇ ಪುಟದಿಂದ)

ನಾಟಕ ನೋಡಿದ್ದಾರೋ ಗೊತ್ತಿಲ್ಲ. ಆದರೆ ಒಮ್ಮೆ ಕೂಡಾ ಅವರು ಅದಕ್ಕೆ ಪ್ರತಿಕ್ರಿಯಿಸದ ಈಗ ಒಮ್ಮೆಲೆ ರಂಗ ಭೂಮಿ ಉಳಿಯಬೇಕೆನ್ನುವ ಕಾಳಜಿ ತೋರುತ್ತಿರುವುದು ಆಶ್ಚರ್ಯ ತಂದಿದೆ.

'ಶೃಂಗ'ರಂಥವರ ಸಹಕಾರ ಕಲಾರಂಗದಂಥ ಸಂಸ್ಥೆಗೆ ಇದ್ದಲ್ಲಿ ರಂಗಭೂಮಿಗೆ ಹೊಸ ಚಾಲನೆ ಯಾಕೆ ಸಿಕ್ಕಬಾರದು ? ಮೊದಲು ಜನ 'ಹಿತ್ತಲ ಗಿಡ ಮದ್ದಲ್ಲ' ಎಂಬ ಧೋರಣೆಯಿಂದ ಹೊರ ಬರಲಿ ಎಂದು ಆಶಿಸುತ್ತೇನೆ.

—ರಮೇಶ್ ಬೇಗಾರ್,
ನಿರ್ದೇಶಕರು, 'ಕಲಾರಂಗ',
ಶೃಂಗೇರಿ.

ಪದಾಧಿಕಾರಿಗಳು

ಜಿಲ್ಲಾ ಕೊರಮ-ಕೊರಚರ ಸಂಘ

ವಿ. ರಾಮಕೃಷ್ಣ (ಅಧ್ಯಕ್ಷ), ಎಚ್. ತಿಮ್ಮಯ್ಯ (ಉಪಾಧ್ಯಕ್ಷ), ಎ. ರಾ... ಚಂದ್ರಪ್ಪ (ಪ್ರ ಕಾರ್ಯದರ್ಶಿ), ... ಯಪ್ಪ (ಸಹ ಕಾರ್ಯದರ್ಶಿ), ಮಂಜುನಾ... (ಖಜಾಂಚಿ).

ಸಿಂಡಿಕೇಟ್ ಬ್ಯಾಂಕ್,
ಶಾಖೆ : ಹರಿಹರಪುರ.

ಏಲಂ ನೋಟೀಸ್

ಹರಿಹರಪುರದಿಂದ ಆಗುಂಬೆ ರಸ್ತೆಯಲ್ಲಿ 5 ಕಿ. ಮೀ. ದೂರವಿರು... ನಿಲುವಾಗಿಲು ಗ್ರಾಮದಲ್ಲಿ ಸ್ವಯಂ ಉದ್ಯೋಗ ಸಾಲ ಯೋಜನೆಯಲ್ಲಿ ಬ್ಯಾಂಕ್... ಆಧಾರವಾಗಿರುವ ಈ ಕೆಳಕಂಡ ಕಾಫಿ ಪುಡಿ ಮಾಡುವ ಯಂತ್ರೋಪಕರ... ಗಳನ್ನು ಸಾಲ ತೀರುವಳಿ ಮಾಡಲು ಬಹಿರಂಗ ಹರಾಜಿಗೆ ಇಡಲಾಗಿದೆ. ಯಂತ್ರೋ... ಕರಣಗಳನ್ನು ಯಥಾ ಸ್ಥಿತಿಯಲ್ಲಿಯೇ ದಿನಾಂಕ : **30-5-90** ರಂದು ಬೆಳ... **10-30** ಗಂಟೆಗೆ ಹರಾಜು ಮಾಡಲಾಗುವುದು. ಸದರಿ ಹರಾಜಿನಲ್ಲಿ ಭಾಗವಹಿಸ... ವರು ವಾರದ ದಿನಗಳಲ್ಲಿ ಬೆಳಗ್ಗೆ 10-00 ರಿಂದ 2-00 ರ ಒಳಗೆ ಬ್ಯಾಂಕಿಗೆ ಬಂ... ಹೆಚ್ಚಿನ ವಿವರಗಳನ್ನು ಪಡೆಯಬಹುದು.

ಯಂತ್ರೋಪಕರಣಗಳ ತಪಶೀಲು :

ಕ್ರ. ಸಂಖ್ಯೆ.	ವಿವರ	ಸಂ...
1.	ಜನತಾಬ್ರಾಂಡ್ ಕಾಫಿಪುಡಿ ಮಾಡುವ ಯಂತ್ರ, 0.75 ಅಶ್ವಶಕ್ತಿಯ ರೆಮಿ ಎಲೆಕ್ಟ್ರಿಕಲ್ಸ್ ಕಂಪನಿಯ ಮೋಟಾರ್ ಮತ್ತು ಬೆಲ್ಟ್‌ನೊಂದಿಗೆ—ತೂಕ-13.6 ಕೆಜಿ.	1
2.	ಈಗಲ್ ಬ್ರಾಂಡ್ ಸ್ವಿಚ್ 1ಗಿಯರ್ 3 ಫೇಸ್, 450 ವೋಲ್ಟ್ಸ್ 16 ಎಂಪ್ಸ್.	1
3.	ಕೃಷ್ಣಾ ಮಿಕ್ಸ್ ಕೆಪಾಸಿಟರ್ 13 42 ವಿಐ 1 ಕೆಡಬ್ಲ್ಯೂ	1
4.	ಎಲ್ ಕೆ ಬ್ರಾಂಡ್ ಸಾರ್ಟರ್ ಮೀಟರ್ ಮತ್ತು ವೈರ್ ಸಹಿತ	2
5.	ಜನತಾ ಬ್ರಾಂಡ್ 0.5 ಕೆ ಡಬ್ಲ್ಯೂ : 1 ಹೆಚ್ ಪಿ : 1375 ಆರ್‌ಪಿಎಂ ಮೋಟಾರ್ ಅಳವಡಿತ ಕಾಫಿ ಹುರಿಯುವ ರೋಸ್ಟರ್ ಯಂತ್ರ—ತೂಕ : 8.8 ಕೆಜಿ.	1

(ಸಹಿ) **ಮ್ಯಾನೇಜರ್,**
ಸಿಂಡಿಕೇಟ್ ಬ್ಯಾಂಕ್,
ಹರಿಹರಪುರ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು : ದೀಪಟೆಗೆ ಅಚ್ಚುಕೂಟ, ಕೊಪ್ಪ